ಓ.ಎಸ್. ನಂ. 26/2016
ಡಿ.ಡಬ್ಲ್ಯೂ- 2

(ಇಂದು ದಿಃ 15-10-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)

ಪಾಟೀ ಸವಾಲು **:- ಶ್ರೀ.RM** ವಕೀಲರಿಂದ **:-**

ನನಗೆ ದಾವೆ ಸಂಗತಿಗಳ ಬಗ್ಗೆ ಸಂಪೂರ್ಣ ಮಾಹಿತಿ ಇದೆ. ದಾವೆ ಸರ್ವೆ ನಂಬರ ಮುಂಚೆ 8 ಎಕರೆ 19 ಗುಂಟೆ ಇತ್ತು. ಮುಂಚೆ ದಾವಾ ಸರ್ವೆ ನಂಬರಲ್ಲಿನ 8 ಎಕರೆ 19 ಗುಂಟೆ ಜಮೀನು ವಾದಿ ಸಿದ್ದಣ್ಣನ ತಂದೆ ಸಾಬಣ್ಣನ್ನ ಹೆಸರಿನಲ್ಲಿತ್ತು ಎಂದರೆ ಸರಿ. ಸಾಬಣ್ಣ ತೀರಿಹೋದ ಮೇಲೆ ಸದರಿ ಜಮೀನು ವಾದಿ ಸಿದ್ದಣ್ಣನ ಹೆಸರಿಗೆ ಆಯಿತು ಎಂದರೆ ಸರಿ. ಸಾಬಣ್ಣ 1998 ರಲ್ಲಿ ತೀರಿ ಹೋಗಿದ್ದಾರೆ. ವಾದಿ ಸಿದ್ದಣ್ಣ ಕೊಡ್ಲಾದಲ್ಲಿ ಇರುತ್ತಿರಲಿಲ್ಲ ದುಡಿದು ತಿನ್ನಲು ಮುಂಬೈಗೆ ಹೋಗಿದ್ದರು ಎಂದರೆ ನನಗೆ ಗೊತ್ತಿಲ್ಲ. ವಾದಿ ಸಿದ್ದಣ್ಣ ಮುಂಬೈನಿಂದ 3-4 ತಿಂಗಳಿಗೊಮ್ಮೆ ಗ್ರಾಮಕ್ಕೆ ಬಂದು ಹೋಗುತ್ತಿದ್ದ ಎಂದರೆ ಸರಿ. ಸಿದ್ದಣ್ಣನ ಕುಟುಂಬ ಮುಂಬೈನಲ್ಲಿ ವಾಸ ಇದ್ದರು ಎಂದರೆ ನನಗೆ ಗೊತ್ತಿಲ್ಲ. ವಾದಿ ಸಿದ್ದಣ್ಣ 2016 ರಲ್ಲಿ ಕೊಡ್ಲಾಗೆ ಬಂದು ವಾಸ ಮಾಡಲು ಆರಂಭಿಸಿದರು ಎಂದರೆ ನನಗೆ ಗೊತ್ತಿಲ್ಲ. ಇವತ್ತಿಗೂ ದಾವಾ ಸರ್ವೆ ನಂಬರಲ್ಲಿನ 2 ಎಕರೆ ಜಮೀನು ಸಿದ್ದಣ್ಣನ ಹೆಸರಿನಲ್ಲಿದೆ ಎಂದರೆ ಸರಿ.

ಸಾಬಣ್ಣನಿಗೆ ಇಬ್ಬರೂ ಹೆಂಡತಿಯರು ಇದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಬಣ್ಣನ ಇಬ್ಬರೂ ಹೆಂಡತಿಯರ ಹೆಸರುಗಳು ಮತ್ತು ಅವರ ತವರು ಮನೆ ನನಗೆ ಗೊತ್ತಿಲ್ಲ. ಸಾಬಣ್ಣನಿಗೆ ಇಬ್ಬರೂ ಹೆಂಡತಿಯರು ಮತ್ತು ಅವರ ಹೆಸರುಗಳನ್ನು ನನ್ನ ತಕರಾರಿನಲ್ಲಿ ಹೇಳಿ ಬರೆಸಿಲ್ಲ. ಸಾಬಣ್ಣನ ಮೊದಲನೆ ಹೆಂಡತಿ ಮಕ್ಕಳು ಭೀಮಣ್ಣ, ದ್ಯಾವಪ್ಪ ಮತ್ತು ಕಾಶಪ್ಪ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಭೀಮಣ್ಣ, ದ್ಯಾವಪ್ಪ ಮತ್ತು ಕಾಶಪ್ಪ ಸಾಬಣ್ಣನ ಕುಟುಂಬಕ್ಕೆ ಮತ್ತು ದಾವಾ ಸ್ವತ್ತಿಗೆ ಯಾವುದೇ ರೀತಿ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸಾಬಣ್ಣನಿಗೆ ಇಬ್ಬರು ಹೆಂಡತಿಯರು ಇದ್ದರು ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿಲ್ಲ. ಭೀಮಣ್ಣ, ದ್ಯಾವಪ್ಪ ಮತ್ತು ಕಾಶಪ್ಪ ಸಾಬಣ್ಣನ ಮೊದಲನೆ ಹೆಂಡತಿ ಮಕ್ಕಳು ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿಲ್ಲ. ಸಾಬಣ್ಣನಿಗೆ ಬಸಮ್ಮ ಎಂಬ ಒಬ್ಬಳೇ ಹೆಂಡತಿ ಇದ್ದಳು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಇಬ್ಬರು ಹೆಂಡತಿಯರು ಇದ್ದರು ಎಂದು ಹೇಳುತ್ತಾರೆ.

6 ಎಕರೆ 19 ಗುಂಟೆ ಜಮೀನನ್ನು ನನ್ನ ತಂದೆ ತಿಪ್ಪಣ್ಣ ಸಾಬಣ್ಣ ರವರಿಂದ ಖರೀದಿ ಮಾಡಿದ್ದಾರೆ. ನನ್ನ ತಂದೆ ದಾವಾ ಸರ್ವೆ ನಂಬರನಲ್ಲಿ 6 ಎಕರೆ 19 ಗುಂಟೆ ಯನ್ನು ಸಾಬಣ್ಣ ರವರಿಂದ ಖರೀದಿ ಮಾಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಖರೀದಿ

ಪತ್ರ ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ. 6 ಸಾವಿರ ರೂಪಾಯಿಗೆ ಖರೀದಿ ಆಗಿದೆ ಎಂದು ಪತ್ರ ಬರೆದಿದ್ದರು ಆದರೆ ಅದು ಕಳೆದು ಹೋಗಿದೆ ನನ್ನ ತಂದೆ 6 ಸಾವಿರ ರೂಪಾಯಿಗೆ ಸದರಿ ಜಮೀನು ಖರೀದಿ ಮಾಡಿದ್ದರು ಮತ್ತು ಆ ಬಗ್ಗೆ ಸಾಬಣ್ಣ ಖರೀದಿ ಪತ್ರ ಬರೆದುಕೊಟ್ಟಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಬಣ್ಣ ಜಮೀನು ಮಾರಾಟ ಮಾಡುವಾಗ ಯಾರು ಯಾರು ಇದ್ದರು ಹೇಳಲು ಆಗುವುದಿಲ್ಲ.

ಭೀಮಣ್ಣ, ದ್ಯಾವಪ್ಪ ಮತ್ತು ಕಾಶಪ್ಪ 1987-88 ರಲ್ಲಿ 6 ಎಕರೆ 19 ಗುಂಟೆ ಜಮಿನನ್ನು ತಮ್ಮ ಹೆಸರಿಗೆ ಮುಟೇಷನ ಮಾಡುವಂತೆ ಅರ್ಜಿ ಸಲ್ಲಿಸಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಭೀಮಣ್ಣ, ದ್ಯಾವಪ್ಪ ಮತ್ತು ಕಾಶಪ್ಪ ರವರು ದಾವಾ ಆಸ್ತಿಗೆ ಸಂಬಂಧ ಪಟ್ಟವರಲ್ಲ ಎಂದರೆ ಸರಿಯಲ್ಲ. ಭೀಮಣ್ಣ, ದ್ಯಾವಪ್ಪ ಮತ್ತು ಕಾಶಪ್ಪ ರವರಿಗೆ AC ಕಚೇರಿಯಲ್ಲಿ ಅಪೀಲು ಸಲ್ಲಿಸುವ ಯಾವುದೇ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ಅಪೀಲನಲ್ಲಿ ಸಾಬಣ್ಣ ಅಥವ ವಾದಿ ಸಿದ್ದಣ್ಣ ಪಾರ್ಟಿ ಇರಲಿಲ್ಲ ಎಂದರೆ ಸರಿ. ವಾದಿ ಸಿದ್ದಣ್ಣ ಮುಂಬೈನಲ್ಲಿ ವಾಸ ಆಗಿದ್ದ ಕಾರಣ ದಾವಾ ಸ್ವತ್ತಿನ ಸಂಬಂಧ ಆದ ವಿಷಯಗಳ ಬಗ್ಗೆ ಅವರಿಗೆ ಮಾಹಿತಿ ಇರಲಿಲ್ಲ ಎಂದರೆ ಸರಿಯಲ್ಲ. ಸಿದ್ದಣನಿಗೆ ಕಂದಾಯ ಇಲಾಖೆಯವರು ಯಾವತ್ತು ಯಾವುದೇ ನೋಟಿಸ ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ಭೀಮಣ್ಣ, ದ್ಯಾವಪ್ಪ ಮತ್ತು ಕಾಶಪ್ಪ ಅರ್ಜಿ ಸಲ್ಲಿಸಿದಾಗ ಸದರಿ ಅರ್ಜಿಯ ನೋಟಿಸನ್ನು ಕಂಾದಯ ಇಲಾಖೆಯವರು ವಾದಿ ಸಿದ್ದಣ್ಣನಿಗೆ ಅಥವಾ ಸಾಬಣ್ಣನಿಗೆ ಕೊಟ್ಟ ಬಗ್ಗೆ ನಾನು ದಾಖಲಾತಿ ಹಾಜರುಪಡಿಸಿಲ್ಲ. ಭೀಮಣ್ಣ, ದ್ಯಾವಪ್ಪ ಮತ್ತು ಕಾಶಪ್ಪ ಸಾಬಣ್ಣನ 1 ನೇ ಹೆಂಡತಿ ಮಕ್ಕಳು ಎಂದು ಅವರ ಹೆಸರಿಗೆ ಮುಟೇಷನ ಮಾಡಿದ್ದಾರೆ. ಸದರಿ ಮುಟೇಷನ ಆಗುವಾಗ ಸಿದ್ದಣನಿಗೆ ನೋಟಿಸ ಕೊಟ್ಟಿದ್ದರು ಅಥವಾ ಇಲ್ಲ ನನಗೆ ಗೊತ್ತಿಲ್ಲ. ಭೀಮಣ್ಣ, ದ್ಯಾವಪ್ಪ ಮತ್ತು ಕಾಶಪ್ಪ ದಾವಾ ಸ್ವತ್ತಿಗೆ ಯಾವುದೇ ರೀತಿ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ವಾದಿ ಸಿದ್ದಣ್ಣನಿಗೆ ಗೊತ್ತಿಲ್ಲದ ಹಾಗೆ ಭೀಮಣ್ಣ, ದ್ಯಾವಪ್ಪ ಮತ್ತು ಕಾಶಪ್ಪ ದಾವಾ ಜಮೀನನ್ನು ತಮ್ಮ ಹೆಸರಿಗೆ ದಾಖಲು ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಮುಟೇಷನ ಮಾಡುವ ಮುಂಚೆ ಸಿದ್ದಣನಿಗೆ ಯಾವುದೇ

ನೋಟಿಸ ಕೊಟ್ಟಿರಲಿಲ್ಲ ಕಾರಣ ಆದೇಶ ಮತ್ತು ಮುಟೇಷನ ಸಿದ್ದಣ್ಣನಿಗೆ ಬಂಧನಕಾರಕ ಆಗಿರಲಿಲ್ಲ ಎಂದರೆ ಸರಿಯಲ್ಲ.

(ವಾದಿ ಪರ ವಕೀಲರ ವಿನಂತಿ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಸೇಡಂ.